ಕೃಷ್ಣಮೂರ್ತಿ ಪ್ರತಿಷ್ಠಾನ ಭಾರತ

ಸಹ ಪಯಣ

ಬೆಂಗಳೂರು ಶಿಕ್ಷಣ ಕೇಂದ್ರದ ತ್ರೈಮಾಸಿಕ ವಾರ್ತಾಪತ್ರ

ಸಂಪುಟ ೨೩ ೧ ಆಗಸ್ಟ್ ೨೦೨೨ ಸಂಚಿಕೆ ೧

"ಆಹಾರ, ವಸತಿ ಮತ್ತು ಉಡುಪುಗಳನ್ನು ಬಿಟ್ಟರೆ ಬೇರೆ ಏನನ್ನೂ ಯಾರೂ ಕೊಡಲಾರರು. ನೀನು ನಿನ್ನ ಗುರುಗಳು ಅಥವಾ ದೇವರುಗಳು ಅಥವಾ ಇನ್ನಾರನ್ನೋ ಇದಕ್ಕಾಗಿ ಕೇಳಲಾಗಲಿ ಅಥವಾ ಅವರಿಂದ ಇದಕ್ಕಾಗಿ ಎದುರು ನೋಡಲಾಗಲಿ ಸಾಧ್ಯವಾಗುವುದಿಲ್ಲ. ನಿನಗೆ ಸ್ವಾತಂತ್ರ್ಯತೆಯ ಮತ್ತು ಸುವ್ಯವಸ್ಥೆಯನ್ನು ಯಾರೂ ಕೊಡಲಾರರು. ಹೀಗಾಗಿ ನೀನು ಸುವ್ಯವಸ್ಥೆಯನ್ನು ಹೇಗೆ ತಂದುಕೊಳ್ಳಬೇಕೆಂಬುದನ್ನು ನಿನ್ನಲ್ಲೇ ಕಂಡುಕೊಳ್ಳಬೇಕು. ಅಂದರೆ, ನೀನು ಗಮನವಿಟ್ಟು ನೋಡಬೇಕು, ನಿನಗೆ ನೀನೇ ಕಂಡುಕೊಳ್ಳಬೇಕು."

ಜೆ. ಕೃಷ್ಣಮೂರ್ತಿ

ಪೂರ್ಣ ಬಿಡುಗಡೆಯಲ್ಲಿ ಮನುಷ್ಯನ ಅನನ್ಯತೆ

ಪ್ರಶ್ನೆ ಏನೆಂದರೆ: ಪ್ರಜ್ಞೆಯನ್ನು ರೂಪಿಸುವ ಪ್ರಜ್ಞೆಯ ವಸ್ತುವನ್ನು ಪೂರ್ತಿಯಾಗಿ ಬರಿದುಗೊಳಿಸಬಹುದೆ? ಇದು ಗ್ರೀಕ್‌ನ ಹಾಗೆ ನಿಮಗೆ ಕೇಳುತ್ತದೆಯೆ ? ನಾನು ಹೇಳುತ್ತಿರುವುದು ನಿಮಗೆ ತಿಳಿಯುತ್ತದೆಯೇ ? ಪ್ರಜ್ಞೆಯ ಆಂತರಿಕ ವಸ್ತುವೇ ಅದರ ಆಲೋಚನೆ, ಅದು ಮಾಡಿರುವ ಸಂಗ್ರಹ - ಸಂಪ್ರದಾಯ, ಸಂಸ್ಕೃತಿ, ಹೋರಾಟ, ನೋವು, ದುಃಖ, ವಂಚನೆಗಳಿಂದ ಅದು ಏನು ಪಡೆದಿದೆಯೋ ಅದು ಈ ವಸ್ತುವಿನ ಹೊರತಾಗಿ ಪ್ರಜ್ಞೆ ಎಂದರೇನು ? ಅದರ ವಸ್ತುವಿನ ದೆಸೆಯಿಂದಾಗಿ ನನಗೆ ನನ್ನ ಪ್ರಜ್ಞೆಗೊತ್ತು. ನಾನೋರ್ವ ಹಿಂದೂ, ಬೌದ್ಧ, ಕ್ರಿಶ್ಚಿಯನ್, ಕ್ಯಾಥೊಲಿಕ್, ಸಮತಾವಾದಿ, ಸಮಾಜವಾದಿ, ಕಲಾವಿದ, ವಿಜ್ಞಾನಿ, ತತ್ತ್ವಜ್ಞಾನಿ ನಾನು ಈ ಮನೆಗೆ ಸೇರಿದವನಿದ್ದೇನೆ. ಆಕೆ ನನ್ನ ಮಡದಿ, ನೀವು ನನ್ನ ಗೆಳೆಯರು, ಬಿಂಬಗಳು, ತೀರ್ಮಾನಗಳು, ಈ ನಲ್ವತ್ತು, ಐವತ್ತು ಅಥವಾ ನೂರು ವರ್ಷಗಳಲ್ಲಿ ನಾನು ಕಟ್ಟಿಕೊಂಡ ನೆನಪುಗಳು ಇವೇ ವಸ್ತು.

> "ತೀವ್ರಭಾವವೆಂಬುದು ಆತ್ಮನಿರಾಕಾರಣದ ಕಠೋರ ರೂಪವಾಗಿದ್ದು ಅದರಲ್ಲಿ 'ನೀನು' 'ನಾನು' ಎಂಬುದಿಲ್ಲ; ಹೀಗಾಗಿ ತೀವ್ರಭಾವವೇ ಬದುಕಿನ ಸಾರಸತ್ವ. ಇದು ಚಲನಶೀಲವೂ ಜೀವಪರವೂ ಆಗಿದೆ"
>
> **ಜೆ.ಕೃಷ್ಣಮೂರ್ತಿ**

ಈ ವಸ್ತುವೇ ನನ್ನ ಪ್ರಜ್ಞೆ ಹಾಗೆಯೇ ನಿಮ್ಮದೂ ಕೂಡ. ಪ್ರಜ್ಞೆಯ ಆ ಕ್ಷೇತ್ರವೇ ಕಾಲ. ಏಕೆಂದರೆ ಅದು ಆಲೋಚನೆಯ ಕ್ಷೇತ್ರ. ಅಳತೆಯ, ಹೋಲಿಕೆಯ, ಬೆಲೆಕಟ್ಟುವ, ಮೌಲ್ಯ ನಿರ್ಣಯ ಮಾಡುವ ಕ್ಷೇತ್ರ. ಅದು ಆ ಕ್ಷೇತ್ರದಲ್ಲೇ ಇದೆ. ಆ ಕ್ಷೇತ್ರದಲ್ಲಿ ನನ್ನೆಲ್ಲ ಪ್ರಜ್ಞೆಯ ಅಥವಾ ಸುಪ್ತಪ್ರಜ್ಞೆಯ ವಿಚಾರಗಳಿವೆ. ಈ ಕ್ಷೇತ್ರದಲ್ಲಿನ ಯಾವುದೇ ಚಲನೆಯು ವಸ್ತುಸಹಿತವಾದ ಪ್ರಜ್ಞೆಯ ಚಲನೆಯಲ್ಲಿದೆ. ಹೀಗಾಗಿ ವಸ್ತುಸಹಿತ ಪ್ರಜ್ಞೆಯಲ್ಲಿನ ಅವಕಾಶ ತುಂಬ ಸೀಮಿತವಾದುದು. ದಯವಿಟ್ಟು ನಾವಿದನ್ನು ಒಟ್ಟಿಗೆ ಕಲಿಯೋಣ. ನಾವು ಇದನ್ನು ಒಟ್ಟಿಗೆ ಕಲಿತರೆ, ಅದು ನನ್ನದಲ್ಲ, ನಿಮ್ಮದಾಗುವುದು. ಆಗ ನೀವು ಎಲ್ಲ ನಾಯಕರುಗಳಿಂದ, ಎಲ್ಲ ಬಗೆಯ ಬೋಧನೆಗಳಿಂದ ಮುಕ್ತರಾಗುವಿರಿ. ನಿಮ್ಮ ಮನಸ್ಸು ಕಲಿಯುತ್ತದೆ. ಕಲಿಕೆಯಲ್ಲಿ ಚೈತನ್ಯವಿದೆ. ನೀವು ಕಂಡುಕೊಳ್ಳಲು ತೀವ್ರವಾಗಿ ಬಯಸುತ್ತೀರಿ. ಆದರೆ ನೀವು ಯಾರನ್ನಾದರೂ ನಾಯಿಯಂತೆ ಹಿಂಬಾಲಿಸುತ್ತಿದ್ದರೆ, ಆಗ ಶಕ್ತಿಹೀನರಾಗುತ್ತೀರಿ.

ನಾವು ಈಗಾಗಲೇ ಹೇಳಿದಂತೆ, ವಸ್ತುಸಹಿತವಾದ ಪ್ರಜ್ಞೆಯ ಕ್ಷೇತ್ರದಲ್ಲಿ ಅಂದರೆ ಕಾಲದಲ್ಲಿ ಅವಕಾಶ ತುಂಬ ಸೀಮಿತ. ನೀವು ನಿಮ್ಮ ಊಹಾ ಶಕ್ತಿಯಿಂದ, ಕಲ್ಪನಾ ಸಾಮರ್ಥ್ಯದಿಂದ, ವಿವಿಧ ಪ್ರಕ್ರಿಯೆಗಳಿಂದ, ತುಂಬ ಸೂಕ್ಷ್ಮವಾಗಿ ಆಲೋಚಿಸುವ ಮೂಲಕ, ಉದ್ದೇಶಪೂರ್ವಕ ಚಿಂತನೆಯ ಮೂಲಕ ಅವಕಾಶವನ್ನು ವಿಸ್ತರಿಸಬಹುದು. ಆದರೂ ಅದು ವಸ್ತುಸಹಿತವಾದ ಪ್ರಜ್ಞೆಯ ಸೀಮಿತ ವಲಯದಲ್ಲೇ ಇರುತ್ತದೆ. ಅರ್ಥವಾಗುತ್ತಿದೆಯೇ? ಹೀಗಾಗಿ ಮೀರಿನಿಲ್ಲುವ ಯಾವುದೇ ಚಲನೆಯು ವಸ್ತುವಿನ ಪರಿಧಿಯಲ್ಲೇ ಇರುತ್ತದೆ. ಆದುದರಿಂದಲೇ ನೀವು ಯಾವುದೇ ಬಗೆಯ ಉದ್ದೀಪನ ದ್ರವ್ಯ ಸೇವಿಸಿದಾಗ, ಅದು ಆ ಪ್ರಜ್ಞೆಯ ಆಲೋಚನೆಯ ಚಟುವಟಿಕೆಗೇ ಸೀಮಿತವಾಗಿರುತ್ತದೆ. ಅದರಾಚೆಗೆ ಸರಿಯುತ್ತಿದ್ದೇನೆ ಎಂದು ಭಾವಿಸಿದರೂ ಅದರಲ್ಲೇ ಇರುತ್ತೀರಿ. ಅದೊಂದು ವಿಚಾರ ಮಾತ್ರ ಅಥವಾ ನೀವು ತುಂಬ ಗಾಢವಾಗಿ ವಸ್ತುವನ್ನು ಅನುಭವಿಸುತ್ತೀರಿ. ಹೀಗಾಗಿ ಅದೆಷ್ಟೇ ವಿಕೃತವಾಗಿದ್ದರೂ ವಸ್ತುವಿನಲ್ಲಿರುವ ಅವಕಾಶ, ಅದೇ 'ನಾನು', ಅಹಂ, ವ್ಯಕ್ತಿ, ತಥಾಕಥಿತ ವ್ಯಕ್ತಿ ಇದೆಲ್ಲವೂ ಆ ಪ್ರಜ್ಞೆಯ ವಲಯದಲ್ಲೇ ಸೀಮಿತವಾಗಿರುತ್ತದೆ. ಹೀಗಾಗಿ ಅದರಾಚೆಗೆ ಸರಿಯುವ ಯಾವುದೇ ಪ್ರಜ್ಞಾಪೂರ್ವಕವಾದ ಪ್ರಯತ್ನವು ಭ್ರಮೆಗೆ ಆಹ್ವಾನ ನೀಡಿದಂತೆ. ನಿಮಗೆ ಅರ್ಥವಾಗುತ್ತಿದೆಯೋ ಇಲ್ಲವೋ ? ಅರ್ಥಮಾಡಿಕೊಳ್ಳದೆ, ಇರುವ ವಸ್ತುವನ್ನೆಲ್ಲ ಬರಿದುಗೊಳಿಸದೆ ನೀವು ಕಂಡುಕೊಳ್ಳುತ್ತೀರಿ ಎಂದು ಗುರು ನಿಮಗೆ ಹೇಳುವುದು ತೀರ ಅಸಂಬದ್ಧ: ಏನನ್ನೋ ಪಡೆಯಲು ಸುಮ್ಮನೆ ಅಭ್ಯಾಸ ಮಾಡುವುದಿದೆಯಲ್ಲ ಅದು ಕುರುಡನೊಬ್ಬ ಕುರುಡನಿಗೆ ದಾರಿ ತೋರಿಸಿದ ಹಾಗೆ. ಸಾಮಾನ್ಯವಾಗಿ ಗುರುಗಳು ಕುರುಡರು, ಅವರ ಅನುಯಾಯಿಗಳು ಕೂಡ ಕುರುಡರೇ. ಹೀಗಾಗಿ ಈ ಪ್ರಶ್ನೆ : ಮನಸ್ಸು ಅದರ ವಸ್ತುವಿನಿಂದಾಗಿದೆ, ಮಿದುಳು ಗತಕಾಲದ್ದಾಗಿದ್ದು ಈ ಗತದಿಂದ ಆಲೋಚನೆ ಕೆಲಸ ಮಾಡುತ್ತದೆ. ಆಲೋಚನೆ ಎಂದಿಗೂ ಮುಕ್ತವೂ ನೂತನವೂ ಆಗಿರಲು ಸಾಧ್ಯವಿಲ್ಲ. ಆದುದರಿಂದಲೇ ಮೂಡುವ ಪ್ರಶ್ನೆ ಎಂದರೆ: ವಸ್ತುವನ್ನು ಬರಿದುಗೊಳಿಸುವುದು ಹೇಗೆ? ಯಾವುದೇ ವಿಧಾನದಿಂದ ಹೀಗೆ ಮಾಡುವುದಲ್ಲ ಏಕೆಂದರೆ ನಿಮ್ಮದೇ ವಿಧಾನ ಅಥವಾ ಯಾರೋ ನಿಮಗೆ ಹೇಳಿಕೊಟ್ಟ ವಿಧಾನವನ್ನು ಆಚರಣೆಗೆ ತರಲು ಶುರುಮಾಡಿದೊಡನೆಯೆ ಅದು ಯಾಂತ್ರಿಕವಾಗಿ ಬಿಡುತ್ತದೆ. ಹೀಗಾಗಿ ಅದು ಕಾಲ ಹಾಗೂ ಸೀಮಿತ ಅವಕಾಶದ ಕ್ಷೇತ್ರದಲ್ಲಿರುತ್ತದೆ. ಅವಕಾಶ ಎಂದರೇನು ಎಂಬ ಬಗ್ಗೆ ನೀವೆಂದಾದರೂ ಯೋಚಿಸಿದ್ದೀರಾ ಅಥವಾ ನಿಮ್ಮೊಳಗೆ ಕಂಡುಕೊಳ್ಳಲು ಯತ್ನಿಸಿದ್ದೀರಾ ಎಂಬುದು ನನಗೆ ತಿಳಿದಿಲ್ಲ. ಇದು ವೈಜ್ಞಾನಿಕ ಕಲ್ಪನೆ ಕಟ್ಟಿಕೊಂಡ ಅವಕಾಶ, ಕಾಲ ಅಥವಾ ಕಾಲಾತೀತವಲ್ಲ. ಆದರೆ ಅವಕಾಶ ಅಂದರೇನು ಎಂಬುದನ್ನು ಶೋಧಿಸಲು ಕಲಿಯುವುದು. ನಾವಿದನ್ನು

ಮಾಡುವವರಿದ್ದೇವೆ. ಮನಸ್ಸು ತನ್ನ ಮಿತಿಯನ್ನು ಕಂಡುಕೊಳ್ಳಬಲ್ಲುದೆ? ಈ ಮಿತಿಯ ಪರಿಭಾವನೆಯೇ ಅದರ ಅಂತ್ಯ. ಈಗ ಮನಸ್ಸನ್ನು ಖಾಲಿಗೊಳಿಸುವುದು ಹೇಗೆ ಎಂಬುದು ಪ್ರಶ್ನೆಯಲ್ಲ. ವಸ್ತುವಿನಿಂದ ರೂಪಿತವಾದ ಪ್ರಜ್ಞೆ ಅದನ್ನು ಪೂರ್ಣವಾಗಿ ನೋಡುವುದು, ಪರಿಭಾವಿಸುವುದು, ಪ್ರಜ್ಞೆಯ ಎಲ್ಲ ಚಲನೆಯನ್ನು ಆಲಿಸುವುದು ಮತ್ತು ಅದರ ಪರಿಭಾವನೆಯೇ ಅದರ ಕೊನೆ. ಹೇಗೆ ಕೊನೆಗೊಳಿಸುವುದು ಎಂಬುದಲ್ಲ, ಹುಸಿ ಯಾವುದು ಎಂದು ನಾನು ಕಂಡುಕೊಂಡರೆ ಆ ಹುಸಿಯ ಪರಿಭಾವನೆಯೇ ನಿಜವಾದುದು. ನಾನು ಸುಳ್ಳು ಹೇಳುತ್ತಿದ್ದೇನೆ ಎಂಬ ಭಾವನೆಯೇ ನಿಜ. ನನ್ನ ಅಸೂಯೆಯ ಬಗೆಗಿನ ಪರಿಭಾವನೆಯೇ ಅಸೂಯೆಯಿಂದ ಬಿಡುಗಡೆ, ಅದೇ ಸತ್ಯ, ಅಂದರೆ ಅವಲೋಕನಕಾರನಿಲ್ಲದಿರುವಾಗ ನೀವು ಸ್ಪಷ್ಟವಾಗಿ ನೋಡಲು ಸಾಧ್ಯ, ಅವಲೋಕನ ಮಾಡಲು ಸಾಧ್ಯ. ಅವಲೋಕನಕಾರನೆಂದರೆ ಗತ, ಬಿಂಬ, ತೀರ್ಮಾನ, ಅಭಿಪ್ರಾಯ, ತೀರ್ಪು ಎಲ್ಲ. ಹೀಗಾಗಿ ಯಾವುದೇ ಪ್ರಯತ್ನವಿಲ್ಲದೆ ತನ್ನ ವಸ್ತುವನ್ನು, ಅದರ ಮಿತಿಯನ್ನು ಅಂದರೆ ಅವಕಾಶ ಇಲ್ಲದಿರುವುದನ್ನು ಮತ್ತು ವಸ್ತುಸಹಿತವಾದ ಪ್ರಜ್ಞೆಯ ಕಾಲಬದ್ಧ ಗುಣವನ್ನು ಮನಸ್ಸು ನಿಚ್ಚಳವಾಗಿ ಕಾಣಬಲ್ಲುದೆ ?

> *"ಎಚ್ಚರದ ಕೇಂದ್ರವಾಗಲೀ, ಪರಿಧಿಯಾಗಲೀ ಇರುವುದಿಲ್ಲ."*
>
> **ಜೆ.ಕೃಷ್ಣಮೂರ್ತಿ**

ಇದನ್ನು ಗಮನಿಸಬಲ್ಲಿರಾ? ನೀವು ಮೌನವಾಗಿ ನೋಡಲು ಸಾಧ್ಯವಾದರೆ, ಅವಲೋಕನಕಾರ ಪೂರ್ಣ ಮೌನದಲ್ಲಿದ್ದರೆ ಆಗ ಪ್ರಜ್ಞೆಯ ಮತ್ತು ಸುಪ್ತಪ್ರಜ್ಞೆಯ ವಸ್ತುವನ್ನು, ಪೂರ್ಣತೆಯನ್ನು ಗಮನಿಸಲು ಸಾಧ್ಯ; ಅಂದರೆ ನಾನು ನಿಮ್ಮನ್ನು ನೋಡಬೇಕಾದರೆ, ನನ್ನ ದೃಷ್ಟಿ ಮಸುಕಾಗಿರಬಾರದು. ನನ್ನ ಕಣ್ಣಿನ ದೃಷ್ಟಿ ತುಂಬ ಚೆನ್ನಾಗಿರಬೇಕು. ಹಾಗಿದ್ದರೆ ನಾನು ನಿಮ್ಮ ಅಂಗರಚನೆ, ಕೂದಲು, ನಿಮ್ಮ ಮುಖದ ಮೂಳೆಯ ರಚನೆ, ಇತ್ಯಾದಿಗಳನ್ನು ನೋಡಬಹುದು. ನಾನು ಸ್ಪಷ್ಟವಾಗಿ ನೋಡಬೇಕು. ಹಾಗಂದರೆ ಅದರಲ್ಲಿ ಅವಧಾನವಿರಬೇಕು ಮತ್ತು ಈ ಅವಧಾನದಲ್ಲಿ ಚೈತನ್ಯವಿದೆ. ನೀವು ಅವಧಾನದಿಂದಿರಲು ಪ್ರಯತ್ನಿಸಿದಾಗ, ಶಕ್ತಿಯ ಅಪವ್ಯಯವಾಗುತ್ತದೆ. ನೀವು ನಿಗ್ರಹಿಸಲು ಯತ್ನಿಸಿದರೆ, ಅದೂ ಶಕ್ತಿಯ ಅಪವ್ಯಯವೇ. ನಿಗ್ರಹವು ರೂಢಿಬದ್ಧತೆ, ತುಲನೆ ಹಾಗೂ ದಮನವನ್ನು ಒಳಗೊಂಡಿರುತ್ತದೆ. ಇದೆಲ್ಲವೂ ಶಕ್ತಿಯ ಪೋಲಾಗುವಿಕೆ. ಪರಿಭಾವನೆಯಿರುವಲ್ಲಿ, ಅವಧಾನವಿರುತ್ತದೆ. ಅದೇ ಒಟ್ಟು ಚೈತನ್ಯ. ಇಂಥ ಚೈತನ್ಯದಲ್ಲಿ ಒಂದು ಉಸಿರಿನಷ್ಟೂ ಶಕ್ತಿಯ ಅಪವ್ಯಯವಾಗುವುದಿಲ್ಲ. ಪ್ರಜ್ಞೆ ಮತ್ತು ಸುಪ್ತಪ್ರಜ್ಞೆಯ ವಸ್ತುವನ್ನು ನೀವು ಚೈತನ್ಯಸಹಿತ ನೋಡುವಾಗ ಮನಸ್ಸು ಖಾಲಿಯಾಗಿರುತ್ತದೆ. ಇದು ನನ್ನ ಭ್ರಮೆಯಲ್ಲ, ಇದು ನನ್ನ ಚಿಂತನೆಯಲ್ಲ ಅಥವಾ ನಾನು ಕೈಗೊಂಡ ತೀರ್ಮಾನವೂ ಅಲ್ಲ, ನಾನೊಂದು ತೀರ್ಮಾನ ತೆಗೆದುಕೊಂಡಿದ್ದರೆ, ಇದು ಸರಿ ಎಂದು ಭಾವಿಸಿದ್ದರೆ, ಆಗ ನಾನು ಭ್ರಮಾಧೀನನೆಂದು ಅರ್ಥ. ಅದೊಂದು ಭ್ರಮೆ ಎಂದು ತಿಳಿದಾಗ ನಾನು ಮಾತನಾಡುವುದಿಲ್ಲ. ಏಕೆಂದರೆ ಅದು ಕುರುಡನೊಬ್ಬ ಕುರುಡನಿಗೆ ದಾರಿ ತೋರಿದಂತೆ. ಆದರೆ ತರ್ಕವನ್ನೂ, ಅದರ ಸ್ಪಷ್ಟತೆಯನ್ನೂ ನೀವೇ ನೋಡಬಹುದು. ಅಂದರೆ ನೀವು ಆಲಿಸಬಹುದು. ಗಮನ ಕೊಡಬಹುದು. ನಿಜಕ್ಕೂ ಕಂಡುಕೊಳ್ಳಬಹುದು. ಆದರೆ ವಸ್ತು ಸಹಿತವಾದ ಸುಪ್ತಪ್ರಜ್ಞೆಗೆ ತನ್ನೆಲ್ಲ ಆಳವನ್ನೂ ಬಯಲುಗೊಳಿಸಲು ಸಾಧ್ಯವೇ?

ಮೊದಲಿಗೆ ಪ್ರಶ್ನೆಯನ್ನು ನೋಡಿ. ಆಮೇಲೆ ಮುಂದುವರಿಯಿರಿ. ಜೀವನದಲ್ಲಿ ಉಳಿದೆಲ್ಲ ಸಂಗತಿಗಳ ಹಾಗೆ, ನಾವು ಪ್ರಜ್ಞೆಯನ್ನು ಜಾಗೃತಪ್ರಜ್ಞೆ ಮತ್ತು ಸುಪ್ತಪ್ರಜ್ಞೆ ಎಂದು ವಿಭಜಿಸಿದ್ದೇವೆ; ಕಲಾವಿದರು ಮತ್ತು ವ್ಯಾಪಾರಸ್ಥರು ಎಂಬ ವಿಭಜನೆಯ ಹಾಗೆ ಇದೂ ಇದೆ. ಇದು ನಮ್ಮ ಸಂಸ್ಕೃತಿ ಮತ್ತು ಶಿಕ್ಷಣದಿಂದ ಪ್ರೇರಿತವಾದುದು. ನೀವು ಕೇಳುತ್ತಿರುವ ಪ್ರಶ್ನೆ: ಪ್ರಜ್ಞೆ ಮತ್ತು ಸುಪ್ತಪ್ರಜ್ಞೆಯ ನಡುವೆ ಈ ವಿಭಜನೆ ಇದೆ, ಸುಪ್ತಪ್ರಜ್ಞೆಗೆ ತನ್ನದೇ ಆದ ಆಶಯಗಳಿವೆ; ಅದಕ್ಕೆ ಅದರದ್ದೇ ಆದ ಜನಾಂಗಿಕ ಬಳುವಳಿಯಿದೆ; ಅದರದ್ದೇ ಅನುಭವಗಳಿವೆ. ಇದೆಲ್ಲವೂ ಧೀಶಕ್ತಿಯ ಬೆಳಕಿನಲ್ಲಿ ಪರಿಭಾವನೆಯ ಬೆಳಕಿನಲ್ಲಿ ಬಯಲಾಗುವುದು ಹೇಗೆ? ನೀವು ಈ ಪ್ರಶ್ನೆಯನ್ನು ಕೇಳಿದ್ದೀರಾ? ವಸ್ತುವನ್ನು ಮತ್ತು ಅದರ ವಿಭಜನೆ, ವಿಸಂಗತಿ, ಸಂಘರ್ಷ, ದುಃಖ ಇತ್ಯಾದಿಯನ್ನು ವಿಶ್ಲೇಷಣೆ ಮಾಡುವ ವಿಶ್ಲೇಷಕನಂತೆ ನೀವು ಈ ಪ್ರಶ್ನೆ ಕೇಳುತ್ತೀರಾ? ಅಥವಾ ಉತ್ತರ ಗೊತ್ತಿಲ್ಲದೆ ಈ ಪ್ರಶ್ನೆ ಕೇಳುತ್ತಿದ್ದೀರಾ ? ಇದು ತುಂಬ ಮುಖ್ಯ ಸಂಗತಿ. ಪ್ರಜ್ಞೆಯ ಈ ಸುಪ್ತ ಸಂರಚನೆಯನ್ನು ಬಯಲುಗೊಳಿಸುವುದು ನನಗೆ ನಿಜಕ್ಕೂ ಗೊತ್ತಿಲ್ಲವೆಂದು ನೀವು ಪ್ರಾಮಾಣಿಕವಾಗಿ ಹೇಳುತ್ತೀರಾದರೆ, ಆಗ ನೀವು ಕಲಿಯುತ್ತೀರಿ. ಆದರೆ ನಿಮ್ಮಲ್ಲಿ ಒಂದು ಬಗೆಯ ತೀರ್ಮಾನ, ಪರ ಅಥವಾ ವಿರುದ್ಧ ಅಭಿಪ್ರಾಯ, ಹಾಗೆ ಆಗಲು ಸಾಧ್ಯವಿಲ್ಲ. ಹಾಗೆ ಆಗುತ್ತದೆ ಎಂಬ ರೀತಿಯ ಆಲೋಚನೆ ಇತ್ಯಾದಿಗಳೆಲ್ಲ ಇದ್ದರೆ ನೀವು ಉತ್ತರ ಕಂಡುಕೊಂಡ ಅಥವಾ ಉತ್ತರವಿಲ್ಲ ಎಂದು ಭಾವಿಸಿದ ಮನಸ್ಥಿತಿಯಿಂದ ಅದನ್ನು ಅನುಸಂಧಾನ ಮಾಡುತ್ತೀರಿ.ಹೀಗಾಗಿ ನಿಮಗೆ ಗೊತ್ತಿರುವ ಯಾರೋ ತತ್ತ್ವಜ್ಞಾನಿ, ಮನಃಶಾಸ್ತ್ರಜ್ಞ ಅಥವಾ ವಿಶ್ಲೇಷಕ ಹೇಳಿದ್ದಾನೆ

ಎಂಬ ನೆಲೆಯಲ್ಲಿ ನನಗೆ ಗೊತ್ತಿಲ್ಲ, ಇದೇ ಸತ್ಯ, ಇದೇ ಪ್ರಾಮಾಣಿಕತೆ ಎಂಬ ಮನಸ್ಸು ಹೇಳಿದರೆ ಅದು ನಿಮ್ಮ ತಿಳಿವಳಿಕೆಯಲ್ಲ, ಅವರ ತಿಳಿವಳಿಕೆ'. ನೀವು ಅದನ್ನು ವ್ಯಾಖ್ಯಾನಿಸಿ ಅವರನ್ನು ಅರ್ಥ ಮಾಡಿಕೊಳ್ಳುತ್ತೀರಿ; ಇದು ವಾಸ್ತವವಲ್ಲ. 'ನನಗೆ ಗೊತ್ತಿಲ್ಲ ಎಂದು ನೀವು ಹೇಳುವಾಗ ಏನಿರುತ್ತದೆ? ಅರ್ಥವಾಯಿತಾ? “ನನಗೆ ಗೊತ್ತಿಲ್ಲ” ಎಂದು ನೀವು ಹೇಳಿದರೆ ಆಗ ವಸ್ತುವಿಗೆ ಯಾವ ಮಹತ್ತ್ವವೂ ಇರುವುದಿಲ್ಲ. ಓಹ್, ಇದನ್ನೂ ದಯವಿಟ್ಟು ಗಮನಿಸಿ, ಏಕೆಂದರೆ ಆಗ ಮನಸ್ಸು ತಾಜಾ ಮನಸ್ಸು ಆಗಿರುತ್ತದೆ. ನಿಮಗೆ ಅರ್ಥವಾಯಿತೇ ? ಹೊಸ ಮನಸ್ಸು ಆಗ ಹೇಳುತ್ತದೆ “ನನಗೆ ಗೊತ್ತಿಲ್ಲ” ಎಂದು. ನೀವು ಇದನ್ನು ಖುಷಿಪಡಿಸಲಿಕ್ಕಾಗಿ ಶಾಬ್ದಿಕವಾಗಿ ಹೇಳದೆ, ಎದೆಯಾಳದಿಂದ ಅರ್ಥಸಹಿತ, ಪ್ರಾಮಾಣಿಕತೆ ಯಿಂದ ಹೇಳಿದರೆ ಏನೂ ತಿಳಿಯದ ಆ ಮನಸ್ಸಿನ ಸ್ಥಿತಿ ಎಂಬುದು ವಸ್ತುವನ್ನು ಬರಿದುಗೊಳಿಸಿದ ಪ್ರಜ್ಞೆ ಎಂದರ್ಥ. ಈ ತಿಳಿವಳಿಕೆಯೇ ಅದರ ವಸ್ತು, ನಿಮಗೆ ತಿಳಿಯಿತಾ ? ಇದನ್ನು ನೋಡಿದ್ದೀರಾ? ಆದುದರಿಂದ ಇಂಥ ಮನಸ್ಸು ತನಗೆ ತಿಳಿದಿದೆ ಎಂದು ಹೇಳುವುದೇ ಇಲ್ಲ. ಹೀಗಾಗಿ ಅದು ಸದಾ ನೂತನ, ಜೀವಂತ, ಕ್ರಿಯಾಶೀಲ. ಅದಕ್ಕೆ ಲಂಗರುಗಳಿಲ್ಲ: ಅವಲಂಬನಗಳಿಲ್ಲ. ಅದು ಲಂಗರು ಹಾಕಿದಾಗ, ಅವಲಂಬಿಸಿದಾಗ ಅಭಿಪ್ರಾಯಗಳನ್ನು, ತೀರ್ಮಾನಗಳನ್ನು ಮತ್ತು ಬೇರ್ಪಡಿಕೆಯನ್ನು ಕಲೆ ಹಾಕುತ್ತದೆ. ಇದೇ ಧ್ಯಾನ. ಹಾಗೆಂದರೆ, ಅನುಕ್ಷಣ ಸತ್ಯದ ಪರಿಭಾವನೆ.

ಆತ್ಯಂತಿಕವಾದ ಸತ್ಯದ ಪರಿಭಾವನೆಯಲ್ಲ.ಪ್ರತಿಕ್ಷಣದಲ್ಲೂ ಸತ್ಯ, ಮಿಥ್ಯಗಳ ಪರಿಭಾವನೆ.ವಸ್ತುವೇ ಪ್ರಜ್ಞೆ ಎಂಬ ಸತ್ಯದ ಪರಿಭಾವನೆ. ಈ ವಿಷಯದ ನಿರ್ವಹಣೆ ಹೇಗೆ ಎಂಬುದು ನನಗೆ ತಿಳಿದಿಲ್ಲ ಎಂಬ ಸಾಕ್ಷಾತ್ಕಾರ. ಅದೇ ಸತ್ಯ, ತಿಳಿಯದಿರುವುದು. ಹೀಗಾಗಿ ತಿಳಿಯದಿರುವ ಸ್ಥಿತಿಯಲ್ಲಿ ವಸ್ತುವಿಲ್ಲ. ಅದು ಭಾರಿ ಸರಳ. ನಿಮ್ಮ ಆಕ್ಷೇಪಣೆ ಏನೋ ಭಾರಿ ಸರಳ.

“ಧ್ಯಾನವು ಪ್ರೀತಿಯ ವಿಕಾಸ.
ಅದು ಒಬ್ಬರನ್ನು ಅಥವಾ ಹಲವರನ್ನು
ಪ್ರೀತಿಸುವ ಸಂಗತಿಯಲ್ಲ.”
ಜೆ.ಕೃಷ್ಣಮೂರ್ತಿ

ನೀವು ಜಾಣತನದ, ಜಿಡುಕಿನ, ಚತುರ ಉತ್ತರ ಬಯಸುತ್ತೀರಿ. ಆದರೆ ಅತ್ಯಂತ ಸರಳವಾದ ಹಾಗೆಂದೇ ಅಸಾಧಾರಣ ಚೆಲುವಿನ ಉತ್ತರವನ್ನು ಕಂಡುಕೊಂಡಾಗ ಆಕ್ಷೇಪಿಸುತ್ತೀರಿ. ಹೀಗಾಗಿ ಮನಸ್ಸು ಅಂದರೆ ಮೆದುಳು ತನ್ನ ಮಿತಿಗಳನ್ನು ಅಂದರೆ ಕಾಲದ ಬಂಧನ ಹಾಗೂ ಅವಕಾಶದ ಮಿತಿಯನ್ನು ಕಾಣಬಲ್ಲುದೆ? ಎಲ್ಲಿಯತನಕ ವ್ಯಕ್ತಿ ಸೀಮಿತ ಅವಕಾಶ ಮತ್ತು ಕಾಲಬದ್ಧ ಚಲನೆಯಲ್ಲಿ ಜೀವಿಸುತ್ತಾನೋ ಅಲ್ಲಿಯವರೆಗೆ ಯಾತನೆ, ಮಾನಸಿಕ ಹತಾಶೆ ಹಾಗೂ ಆತಂಕ ಮುಂತಾದವುಗಳು ಇದ್ದೇ ಇರುತ್ತವೆ. ಮನಸ್ಸು ಇದನ್ನೆಲ್ಲ ಪರಿಭಾವಿಸಿದ್ದರೆ ಕಾಲವೆಂದರೇನು ? ಚಿಂತನೆ ಸ್ಪರ್ಶಿಸಲಾರದ, ಹಾಗಾಗಿ ಬಣ್ಣಿಸಲಾರದ ತೀರ ಭಿನ್ನವಾದ ಒಂದು ಆಯಾಮ ಕಂಡುಬರುವುದೇ? ಆಲೋಚನೆಯು ಪ್ರಮಾಣ; ಆದುದರಿಂದ ಅದು ಕಾಲ ಎಂದು ಹೇಳಿದ್ದೆವು. ನಾವು ಅಳತೆ ಅಥವಾ ಪ್ರಮಾಣಕ್ಕೆ ತಕ್ಕಂತೆ ಬದುಕುತ್ತೇವೆ. ನಮ್ಮ ಚಿಂತನೆಯ ಸ್ವರೂಪವೂ ಪ್ರಮಾಣ, ಅಂದರೆ ಅದು ತುಲನೆ, ಮೌಲ್ಯಮಾಪನ ಹಾಗೂ ಆಗುವಿಕೆಯನ್ನು ಆಧರಿಸಿದೆ. ಚಿಂತನೆಯು ಪ್ರಮಾಣವಾಗಿ ತನ್ನನ್ನು ಮೀರಲು, ಅಪ್ರಮೇಯವಾದುದೇನಾದರೂ ಇದೆಯೇ ಎಂದು ಕಂಡು ಹುಡುಕಲು ಯತ್ನಿಸುತ್ತದೆ. ಇದರ ಹುಸಿತನವನ್ನು ಕಂಡುಕೊಳ್ಳುವುದೇ ಸತ್ಯ. ನೀವು ಇದನ್ನು ಗಮನಿಸಿದ್ದೀರಾ? ಹುಸಿಯನ್ನು ಕಂಡುಕೊಳ್ಳುವುದೇ ಸತ್ಯ ಮತ್ತು ಅಳೆಯಲಾಗದ್ದನ್ನು, ಕಾಲವಲ್ಲದ್ದನ್ನು, ಸೀಮಿತ ಅವಕಾಶಕ್ಕೆ ಸಂಬಂಧಪಡದಿರುವುದನ್ನು ಅರ್ಥಾತ್ ಪ್ರಜ್ಞೆಯ ವಸ್ತುವನ್ನು ಚಿಂತನೆಯು ಅರಸುವುದಿದೆಯಲ್ಲ ಅದೇ ಹುಸಿತನ.

ಕೃತಿ: " ಮಾನವನಾಗುವುದು", ಭಾಗ ೧
ಅನುವಾದ: ಡಾ. ಶ್ರೀ ಮಹಾಬಲೇಶ್ವರ ರಾವ್
ಮೂಲ: "To Be Human"

ಸುವ್ಯವಸ್ಥೆ ಎಂದರೇನು?

ನಮ್ಮಲ್ಲಿ ಬಹಳಷ್ಟು ಜನರು ಯಾಕೆ ಹೀಗೆ ಪಡಪೋಸಿಗಳಾಗಿದ್ದಾರೆ ಎಂಬುದರ ಬಗ್ಗೆ ಯಾವಾಗಲಾದರೂ ನೀವು ಯೋಚಿಸಿದ್ದೀರಾ ನಮ್ಮ ದಿರಿಸಿನಲ್ಲಿ, ನಮ್ಮ ನಡವಳಿಕೆಯಲ್ಲಿ, ಚಿಂತನೆಗಳಲ್ಲಿ, ಕೆಲಸಗಳನ್ನು ಮಾಡುವ ರೀತಿಯಲ್ಲಿ ಪಡಪೋಸಿತನ ಯಾಕೆ? ನಾವು ಸಮಯ ಪಾಲನೆಯನ್ನು ಯಾಕೆ ಮಾಡುವುದಿಲ್ಲ, ಇತರರ ಇಷ್ಟಾ ನಿಷ್ಟಗಳನ್ನು ಗಮನಿಸುವುದರಲ್ಲಿ ಆಸಕ್ತಿ ತೋರಿಸುವುದಿಲ್ಲ? ಮತ್ತೆ ನಮ್ಮ ದಿರಿಸಿನಲ್ಲಿ, ನಮ್ಮ ಅಲೋಚನೆಗಳಲ್ಲಿ, ನಮ್ಮ ಮಾತನಾಡುವಿಕೆಯಲ್ಲಿ, ನಮ್ಮ ನಡಿಗೆಯ ರೀತಿಯಲ್ಲಿ, ನಮಗಿಂತ ಕಡಿಮೆ ಅದೃಷ್ಟವಂತರಾದವರಡನೆ ನಡೆದುಕೊಳ್ಳುವ ರೀತಿಯಲ್ಲಿ, ಎಲ್ಲದರಲ್ಲೂ ಸುವ್ಯವಸ್ಥೆಯನ್ನು ತರುವಂತಹುದು ಯಾವುದು? ಯೋಜಿಸದೆ, ಒತ್ತಾಯವಿಲ್ಲದೆ ಸೃಷ್ಟಿಯಾಗುವ ಈ ವಿಲಕ್ಷಣ ಸುವ್ಯವಸ್ಥೆ ಉಂಟಾಗುವುದುಯಾವುದರಿಂದ? ನೀವು ಯಾವತ್ತಾದರೂ ಅದರ ಬಗ್ಗೆ ಯೋಚಿಸಿದ್ದೀರಾ? ಸುವ್ಯವಸ್ಥೆ ಎಂಬುದಕ್ಕೆ ನನ್ನ ಅರ್ಥ ಏನು ಎಂಬುದು ನಿಮಗೆ ಗೊತ್ತೆ? ಅದು ಒತ್ತಡವಿಲ್ಲದೆ ಮೌನವಾಗಿ ಕುಳಿತಿರುವುದು, ಅವಸರವಿಲ್ಲದೆ ನಾಜೂಕಾದ ರೀತಿಯಲ್ಲಿ ತಿನ್ನುವುದು, ಸಾವಕಾಶವಾಗಿದ್ದರೂ ನಿಖರವಾಗಿರುವುದು, ನಮ್ಮ ಚಿಂತನೆಗಳಲ್ಲಿ ಸ್ಪಷ್ಟತೆಯನ್ನು ಹೊಂದಿರುವಾಗಲೂ ವ್ಯಾಪಕತೆ ಹೊಂದಿರುವುದು. ಜೀವನದಲ್ಲಿ ಈ ಸುವ್ಯವಸ್ಥೆಯನ್ನು ತರುವುದು ಯಾವುದು? ಇದು ನಿಜವಾಗಲೂ ಒಂದು ಮುಖ್ಯವಾದ ಅಂಶ. ಜೀವನದಲ್ಲಿ ಸುವ್ಯವಸ್ಥೆಯನ್ನು ಉಂಟುಮಾಡುವ ಅಂಶವನ್ನು ಕಂಡು-ಕೊಳ್ಳುವಂತಹ ಶಿಕ್ಷಣ ನಮಗೆ ಸಿಕ್ಕರೆ ಅದು ಬಹಳ ಮಹತ್ವದ ವಿಷಯ. ನೀವು ಒಂದು ಹೂವನ್ನು ಸೂಕ್ಷ್ಮವಾಗಿ ಗಮನಿಸಿದ್ದೀರಾ? ಅದರೆಲ್ಲಾ ಪಕಳೆಗಳಲ್ಲಿ ಆಶ್ಚರ್ಯಕರವಾದ ನಿಖರತೆಯನ್ನು ಹೊಂದಿದೆ; ಆದರೂ ಅದರ ಒಟ್ಟು ಇರುವಿಕೆಯಲ್ಲಿ ಒಂದು ಸುಗಂಧ, ಚೆಲುವು, ಅಸಾಧಾರಣವಾದ ಕೋಮಲತೆ ಇದೆ. ಒಬ್ಬ ಮನುಷ್ಯ ಸುವ್ಯವಸ್ಥಿತನಾಗಿರಲು ಪ್ರಯತ್ನಿಸಿದಾಗ, ಅವನ ಜೀವನ ಬಹಳ ನಿಖರವಾಗಿರಬಹುದು, ಆದರೆ ಅದು ಆ ಹೂವಿನಲ್ಲಿನಂತೆ ಯಾವುದೇ ಪ್ರಯತ್ನವಿಲ್ಲದೆ ಬರುವ ಕೋಮಲತೆಯನ್ನು ಕಳೆದುಕೊಂಡಿರುತ್ತದೆ. ನಮ್ಮ ಸಮಸ್ಯೆಯೆಂದರೆ, ಪ್ರಯತ್ನವಿಲ್ಲದೆಯೂ ನಿಖರವಾಗಿ, ಸ್ಪಷ್ಟವಾಗಿ ಮತ್ತೆ ಎಲ್ಲವನ್ನೂ ಒಳಗೊಳ್ಳುವಂತೆ ಇರುವುದು ಹೇಗೆ ಎನ್ನುವುದು. ಹಾಗಾದರೆ ಈ ಸಮಸ್ಯೆ ಯಾವ ಬಗೆಯದು? ನಮ್ಮ ಜೀವನದಲ್ಲಿ ಹಲವು ಭಾವನೆಗಳನ್ನು ಒಳಗೊಂಡರೂ ವಿವಿಧ ಚಿಂತನೆಗಳಿಗೆ ಎಡೆನೀಡಿದರೂ ನಿಖರತೆ, ಸ್ಪಷ್ಟತೆ, ಸುವ್ಯವಸ್ಥೆಯನ್ನು ಹೊಂದಿರುವುದಿಲ್ಲ, ಹೇಗೆ? ನಮ್ಮಲ್ಲಿ ಬಹಳಷ್ಟು ಜನ ಹಾಗೆ ಇಲ್ಲ. ಯಾಕೆಂದರೆ ನಾವು ಯಾವುದನ್ನೂ ತೀವ್ರವಾಗಿ ಅನುಭವಿಸುವುದಿಲ್ಲ, ನಮ್ಮ ಮನಸ್ಸು ಮತ್ತು ಹೃದಯಗಳನ್ನು ಯಾವುದಕ್ಕೂ ಪೂರ್ತಿಯಾಗಿ ಕೊಡುವುದಿಲ್ಲ ಎಂದು ನನಗೆ ಅನಿಸುತ್ತದೆ. ಒಮ್ಮೆ ನಾನು ಸುಂದರವಾದ ತುಪ್ಪಳ ಹಾಗೂ ಹೊದರು ಹೊದರಾದ ಬಾಲಗಳನ್ನು ಹೊಂದಿದ್ದ ಎರಡು ಕೆಂಪು ಅಳಿಲುಗಳನ್ನು ನೋಡಿದೆ. ಅವು ಬದುಕಿನ ಸಂತೋಷವನ್ನು ಸವಿಯಲು ಸುಮಾರು ಹತ್ತು ನಿಮಿಷ ಕಾಲ ಎಡಬಿಡದೆ ಎತ್ತರವಾದ ಮರದ ಮೇಲಕ್ಕೆ ಕೆಳಕ್ಕೆ ಒಂದನ್ನೊಂದು ಅಟ್ಟಿಸಿಕೊಂಡು ಹೋಗುತ್ತಿದ್ದವು. ಆ ಘಟನೆ ನೋಡಿದ್ದು ನನ್ನ ನೆನಪಿನಲ್ಲಿ ಉಳಿದಿದೆ. ಆದರೆ ನೀವು ಮತ್ತು ನಾನು ಯಾವುದನ್ನೂ ಆಳವಾಗಿ ಅನುಭವಿಸದಿದ್ದರೆ ಆ ಜೀವನ ಸಂತೋಷವನ್ನು ತಿಳಿಯಲಾರೆವು. ನೀವು ಅಸಾಧಾರಣವಾದ ಗ್ರಹಣಶಕ್ತಿಯನ್ನು ಹೊಂದುವಿರಾದರೆ, ಎಲ್ಲದಕ್ಕೂ ಸೂಕ್ಷ್ಮ ಮನಸ್ಸಿನಿಂದ ಪ್ರತಿಕ್ರಿಯಿಸಬಲ್ಲವರಾದರೆ, ಆ ಸೂಕ್ಷ್ಮತೆಯೇ ಸುವ್ಯವಸ್ಥೆಯನ್ನು ತರುತ್ತದೆ.

> "ಧ್ಯಾನ ಪ್ರಕ್ರಿಯೆಗೆ ಉದ್ದೇಶವೂ ಇಲ್ಲ, ಪ್ರಯೋಜನವೂ ಇಲ್ಲ. ಆದರೆ ಕ್ಷಣಿಕ ಸುಖದ ಸೋಂಕಿಲ್ಲದ ಅದ್ಭುತವಾದ ಆನಂದದ ಪ್ರವಾಹವೇ ಇಲ್ಲಿರುತ್ತದೆ."
> **ಜೆ.ಕೃಷ್ಣಮೂರ್ತಿ**

ವಿದ್ಯಾರ್ಥಿ : ನಾವು ಸ್ವಾತಂತ್ರ್ಯತೆಯ ಮತ್ತು ಸುವ್ಯವಸ್ಥೆಯನ್ನು ಹೊಂದಲೇಬೇಕೆಂದು ನೀವು ಹೇಳುತ್ತೀರಿ. ಆದರೆ ಅದನ್ನು ಪಡೆಯುವುದು ಹೇಗೆ?

ಕೃಷ್ಣಮೂರ್ತಿ: ಮೊಟ್ಟಮೊದಲಿಗೆ, ನೀನು ಇತರರನ್ನು ಅವಲಂಬಿಸಲಾಗದು; ಯಾರೋ ಒಬ್ಬರು ಸ್ವಾತಂತ್ರ್ಯತೆಯ

ಮತ್ತು ಸುವ್ಯವಸ್ಥೆಯನ್ನು ನಿನಗೆ ಕೊಡಬೇಕೆಂದು ನೀನು ಅಪೇಕ್ಷಿಸಲಾಗದು, ಅವರು ನಿನ್ನ ತಂದೆ, ನಿನ್ನ ತಾಯಿ, ನಿನ್ನ ಶಿಕ್ಷಕರು ಯಾರಾದರೂ ಅಷ್ಟೆ. ಅದನ್ನು ನೀನು ನಿನ್ನಲ್ಲಿಯೇ ತಂದುಕೊಳ್ಳಬೇಕು. ಸ್ಪಷ್ಟವಾಗಿ ಗ್ರಹಿಸಿಕೊಳ್ಳಬೇಕಾದ ಮೊದಲನೆ ಸಂಗತಿ ಇದೇ. ಯಾರಿಂದಲೂ, ಏನನ್ನೂ ಕೇಳಲಾಗದು. ಆಹಾರ, ವಸತಿ ಮತ್ತು ಉಡುಪುಗಳನ್ನು ಬಿಟ್ಟರೆ ಬೇರೆ ಏನನ್ನೂ ಯಾರೂ ಕೊಡಲಾರರು. ನೀನು ನಿನ್ನ ಗುರುಗಳು ಅಥವಾ ದೇವರುಗಳು ಅಥವಾ ಇನ್ನಾರನ್ನೋ ಇದಕ್ಕಾಗಿ ಕೇಳಲಾಗಲಿ ಅಥವಾ ಅವರಿಂದ ಇದಕ್ಕಾಗಿ ಎದುರು ನೋಡಲಾಗಲಿ ಸಾಧ್ಯವಾಗುವುದಿಲ್ಲ. ನಿನಗೆ ಸ್ವಾತಂತ್ರ್ಯತೆಯ ಮತ್ತು ಸುವ್ಯವಸ್ಥೆಯನ್ನು ಯಾರೂ ಕೊಡಲಾರರು. ಹೀಗಾಗಿ ನೀನು ಸುವ್ಯವಸ್ಥೆಯನ್ನು ಹೇಗೆ ತಂದುಕೊಳ್ಳಬೇಕೆಂಬುದನ್ನು ನಿನ್ನಲ್ಲೇ ಕಂಡುಕೊಳ್ಳಬೇಕು. ಅಂದರೆ, ನೀನು ಗಮನವಿಟ್ಟು ನೋಡಬೇಕು, ನಿನಗೆ ನೀನೇ ಕಂಡುಕೊಳ್ಳಬೇಕು.... ಒಳ್ಳೆಯವರಾಗಿರುವುದು ಹೇಗೆ, ದಯಾಪರನಾಗಿರುವುದು ಹೇಗೆ, ಇತರರ ಬಗ್ಗೆ ದಾಕ್ಷಿಣ್ಯಪರನಾಗಿರುವುದು ಹೇಗೆ ಎಂದು ತಿಳಿಯಬೇಕು. ಆ ದಾಕ್ಷಿಣ್ಯಪರತೆಯಿಂದ, ಆ ಗಮನಿಸುವಿಕೆಯಿಂದ, ಸುವ್ಯವಸ್ಥೆ ಉಗಮ ವಾಗುತ್ತದೆ. ಆಗ ಅದರಿಂದಲೇ ಸ್ವಾತಂತ್ರ್ಯವೂ ಒಡಮೂಡುತ್ತದೆ.

> *"ನೀವೇ ಅವಲೋಕನಕಾರ ಮತ್ತು ಅವಲೋಕಿತ ಆಗಿರುವುದರಿಂದ, ನೀವೇ ಭೂಮಿ ಹಾಗೂ ಸಮುದ್ರದ ಅಖಂಡ ಚಲನೆ ಕೂಡಾ."*
> **ಜೆ.ಕೃಷ್ಣಮೂರ್ತಿ**

ಕಿಟಕಿಯಿಂದ ಹೊರಗೆ ನೋಡಕೂಡದು, ಸಮಯಪಾಲನೆ ಮಾಡಬೇಕು, ದಯಾಪರನಾಗಿರಬೇಕು' ಹೀಗೆ ಇತರರು ಹೇಳಬೇಕು, ಆಗ ನಾನು ಅದನ್ನು ಪರಿಪಾಲಿಸುತ್ತೇನೆ ಎಂದರೆ, ಆಗ ಅದು ಅನ್ಯರ ಮೇಲಿನ ಅವಲಂಬನೆ. ಬದಲಾಗಿ, `ನನಗೆ ಬೇಕಾದಾಗ ಕಿಟಕಿಯಿಂದ ಹೊರಗೆ ನೋಡುತ್ತೇನೆ. ಆದರೆ, ಓದಿನಲ್ಲಿ ತೊಡಗಿದಾಗ ನಾನು ಪುಸ್ತಕವನ್ನು ನೋಡುತ್ತಿರುತ್ತೇನೆ ಎಂದು ಹೇಳಬಲ್ಲೆಯಾದರೆ, ಆಗ ಇತರರಿಂದ ಹೇಳಿಸಿಕೊಳ್ಳದೆಯೆ ನೀನು ನಿನ್ನೊಳಗೇ ಸುವ್ಯವಸ್ಥೆಯನ್ನು ತಂದು ಕೊಡುತ್ತೀಯಾ, ಯಾವಾಗಲಾದರೂ ನೀನು ಒಬ್ಬನೇ ವಾಕ್ ಮಾಡಿದ್ದೀಯಾ? ಅಥವಾ ಯಾವಾಗಲೂ ಇತರರೊಡನೆ ಹೋಗುತ್ತೀಯಾ? ಆಗೀಗ, ನೀನೊಬ್ಬನೆ ಹೊರಗೆ ಹೋದರೆ, ಬಹಳ ದೂರ ಅಲ್ಲ, ಯಾಕೆಂದರೆ ನೀನಿನ್ನು ಬಹಳ ಚಿಕ್ಕವನು. ಆಗ ನೀನು ನಿನ್ನನ್ನೇ ತಿಳಿದುಕೊಳ್ಳಲು ಆರಂಭಿಸುತ್ತೀಯ, ನೀನೇನು ಯೋಚಿಸುತ್ತೀಯ, ನೀನೇನು ಭಾವಿಸುತ್ತೀಯ. ಸದ್ಗುಣ ಎಂದರೇನು, ನೀನೇನಾಗ ಬೇಕೆಂದಿದ್ದೀಯಾ ಕಂಡುಕೋ. ಇವೆಲ್ಲವನ್ನು ಕಂಡುಕೊಳ್ಳುವ ಬದಲಾಗಿ ಯಾವಾಗಲೂ ಮಾತನಾಡುತ್ತಿದ್ದರೆ, ಅರ್ಥ ದರ್ಥುನ್ ಜನರೊಂದಿಗೆ ಸ್ನೇಹಿತ ರೊಂದಿಗೆ ಅಡ್ಡಾಡುತ್ತಿದ್ದರೆ ನೀನು ನಿನ್ನ ಬಗ್ಗೆ ತಿಳಿದುಕೊಳ್ಳಲಾರೆ. ಒಂದು ಮರದ ಕೆಳಗೆ ಸುಮ್ಮನೆ ನಿನ್ನಷ್ಟಕ್ಕೆ ನೀನು ಕುಳಿತುಕೊ, ಪುಸ್ತಕದೊಂದಿಗೆ ಅಲ್ಲ. ಸುಮ್ಮನೆ ನಕ್ಷತ್ರಗಳತ್ತ, ಮೋಡವಿಲ್ಲದ ಆಕಾಶದತ್ತ, ಹಕ್ಕಿಗಳತ್ತ, ಎಲೆಗಳ ಆಕಾರದತ್ತ ನೋಡು. ನೆರಳನ್ನು ಗಮನಿಸು. ಆಕಾಶದಲ್ಲಿ ಒಂದು ಕಡೆಯಿಂದ ಇನ್ನೊಂದು ಕಡೆಗೆ ಹೋಗುತ್ತಿರುವ ಹಕ್ಕಿಯನ್ನು ಗಮನಿಸು. ನಿನ್ನಷ್ಟಕ್ಕೆ ನೀನೇ ಇರುವುದರಿಂದ, ಒಂದು ಮರದ ಕೆಳಗೆ ಕುಳಿತು ಕೊಳ್ಳುವುದರಿಂದ, ನಿನ್ನ ಮನಸ್ಸು ಹೇಗೆ ಕೆಲಸ ಮಾಡುತ್ತದೆಂಬುದನ್ನು ತಿಳಿಯಲಾರಂಭಿಸುತ್ತೀಯ. ಅದು ನೀನು ತರಗತಿಗೆ ಹೋಗುವುದರಷ್ಟೆ ಮುಖ್ಯವಾದದ್ದು.

ಕೃತಿ: "ಸ್ವಾತಂತ್ರ್ಯ ಎಂದರೇನು",
ಅನುವಾದ: ಗಿರೀಶ್ ವಿ ವಾಘ
ಮೂಲ: What does freedom mean?

ಜ್ಞಾನೋದಯ

ಪೃಚ್ಛಕ: ಎಲ್ಲ ತಥಾಕಥಿತ ಧಾರ್ಮಿಕ ವ್ಯಕ್ತಿಗಳಿಗೆ ಸಮಾನವಾದುದೊಂದಿದೆ. ನಿಮ್ಮ ಮಾತುಗಳನ್ನು ಕೇಳಲು ಬರುವ ಹೆಚ್ಚಿನವರಲ್ಲಿ ನಾನು ಈ ಸಮಾನತೆಯನ್ನು ಕಂಡಿದ್ದೇನೆ. ಅವರೆಲ್ಲ ನಿರ್ವಾಣ, ಬಿಡುಗಡೆ, ಜ್ಞಾನೋದಯ, ಆತ್ಮಸಾಕ್ಷಾತ್ಕಾರ, ಚಿರಂತನ ಅಥವಾ ದೇವರು - ಹೀಗೆ ಬೇರೆ ಬೇರೆ ಹೆಸರುಗಳಲ್ಲಿ ಕರೆಯುವುದನ್ನು ನಿರೀಕ್ಷಿಸುತ್ತಿದ್ದಾರೆ. ಅವರ ಗುರಿ ಖಚಿತವಾಗಿದೆ ಮತ್ತು ಅದು ವಿವಿಧ ಬೋಧನೆಗಳ ಮೂಲಕ ಅವರಿಗೆ ಒದಗಿದೆ. ಈ ಬೋಧನೆಗಳಿಗೆ, ಈ ವ್ಯವಸ್ಥೆಗಳಿಗೆ ತಮ್ಮದೇ ಆದ ಪವಿತ್ರ ಗ್ರಂಥಗಳಿವೆ, ಶಿಷ್ಯವೃಂದ ಇದೆ, ಗುರುಗಳಿದ್ದಾರೆ, ತಮ್ಮದೇ ಆದ ನೈತಿಕತೆ, ತತ್ವಜ್ಞಾನ, ಭರವಸೆ ಹಾಗೂ ಬೆದರಿಕೆಗಳು ಇವೆ, ನೇರ ಹಾಗೂ ಒಳಮಾರ್ಗ ಇದೆ. ಕೊನೆಯಲ್ಲಿ ಸ್ವರ್ಗವೋ ಅಥವಾ ಇನ್ನೇನೋ ದಕ್ಕುತ್ತದೆ ಎಂಬ ಭರವಸೆ ಇದೆ. ಈ ಬಹಳಷ್ಟು ಮಂದಿ ಅರಸುವವರು ಒಂದು ವ್ಯವಸ್ಥೆಯಿಂದ ಇನ್ನೊಂದಕ್ಕೆ ಹಾರುವವರು; ತಾವು ಈಚೆಗೆ ತೊರೆದ ಬೋಧನೆಯ ಸ್ಥಾನದಲ್ಲಿ ಹೊಸತಾದ ಉಪದೇಶವನ್ನು ಪ್ರತಿಷ್ಠಾಪಿಸುವವರು. ಈ ಎಲ್ಲ ಅರಸುವಿಕೆಯಲ್ಲಿ ಒಂದೇ ಪ್ರಕ್ರಿಯೆ ನಿಹಿತವಾಗಿದೆ ಎಂದು ಯೋಚಿಸದೆ ಒಂದು ಭಾವೋನ್ಮಾದದಿಂದ ಇನ್ನೊಂದಕ್ಕೆ ಜಿಗಿಯುತ್ತಾರೆ. ಕೆಲವರು ಒಂದೇ ವ್ಯವಸ್ಥೆಯಲ್ಲಿ ಒಂದು ಗುಂಪಿನ ಜತೆಗೇ ಉಳಿದುಕೊಂಡು ಬದಲಾಗಲು ನಿರಾಕರಿಸುವವರು. ತಾವೇನು ಮನಗಾಣ ಬೇಕೆಂದುಕೊಂಡಿದ್ದೇವೋ ಅದನ್ನು ಮನಗಂಡಿದ್ದಾಗಿದೆ ಎಂದು ನಂಬಿಕೊಂಡು ಪರಮಾನಂದ ಅನುಭವಿಸಿ ಕೆಲವು ದಿನ ತಮ್ಮ ಪಾಡಿಗೆ ಇದ್ದು ಮತ್ತೆ ಕೆಲವು ಶಿಷ್ಯರನ್ನು ಸಂಪಾದಿಸುತ್ತಾರೆ. ಈ ಶಿಷ್ಯರು ಈ ಪರಂಪರೆಯನ್ನು ಮುಂದುವರಿಸುತ್ತಾರೆ. ಈ ಎಲ್ಲದರಲ್ಲಿ ಏನೋ ಒಂದು ಸಾಕ್ಷಾತ್ಕಾರ ಕಂಡುಕೊಳ್ಳಬೇಕೆಂಬ ಹಠಮಾರಿತನದ ದುರಾಸೆ ಇದ್ದಂತಿದೆ. ಇದರ ಜತೆಗೆ ಕಹಿಯಾದ ಭ್ರಮನಿರಸನ, ಹತಾಶೆ ಹಾಗೂ ವೈಫಲ್ಯವೂ ಇದೆ. ಇದೆಲ್ಲ ನನಗೆ ಅನಾರೋಗ್ಯಕರವಾಗಿ ಕಂಡಿದೆ. ಇವರೆಲ್ಲ ಯಾವುದೋ ಒಂದು ಭ್ರಾಮಕ ಗುರಿಗಾಗಿ ತಮ್ಮ ಸಾಮಾನ್ಯ ಜೀವನವನ್ನು ಬಲಿಕೊಡುತ್ತಿದ್ದಾರೆ. ಈ ಬಗೆಯ ಸಾಮಾಜಿಕ ಪರಿಸರದಿಂದ ಉನ್ಮಾದ, ಹಿಂಸೆ, ಮತಾಂಧತೆ ಹಾಗೂ ಮೂರ್ಖತನದಂಥ ತೀರ ಅಹಿತಕರ ಭಾವನೆ ಹೊರಹೊಮ್ಮುತ್ತದೆ. ಕೆಲವು ಒಳ್ಳೆಯ ಬರೆಹಗಾರರೂ ಇದರಲ್ಲಿ

ಇದ್ದಾರೆ ಎಂಬುದು ಅಚ್ಚರಿಯ ಸಂಗತಿ. ಇದನ್ನೆಲ್ಲ ಧರ್ಮವೆಂದು ಕರೆಯಲಾಗುತ್ತಿದೆ. ಇದು ಪರಾಕಾಷ್ಠೆಯ ಸ್ಥಿತಿ. ಇದು ಧರ್ಮನಿಷ್ಠೆಯ ಉದ್ರೇಕ. ನಾನು ಇದನ್ನು ಎಲ್ಲ ಕಡೆಗಳಲ್ಲಿ ಕಂಡಿದ್ದೇನೆ. ಈ ಜ್ಞಾನೋದಯದ ಹುಡುಕಾಟ ಬಹಳಷ್ಟು ಹಾನಿಯನ್ನುಂಟು ಮಾಡುತ್ತಿದೆ. ಅದರ ಕೊರಳಿಗೆ ಜನರನ್ನು ಬಲಿ ಕೊಡಲಾಗುತ್ತಿದೆ. ನಾನೀಗ ನಿಮ್ಮನ್ನು ಕೇಳುವುದೇನೆಂದರೆ ವಾಸ್ತವದಲ್ಲಿ ಜ್ಞಾನೋದಯ ಎನ್ನುವಂಥದ್ದಿದೆಯಾ? ಇದ್ದರೆ ಅದು ಏನು?

ಕೃಷ್ಣಮೂರ್ತಿ: ದಿನನಿತ್ಯದ ಜೀವನ ಸಂಬಂಧ ಒಂದು ಅಸಾಧಾರಣ ಚಲನೆ. ಇದು ದಿನನಿತ್ಯದ ಜೀವನದಿಂದ ಮಾಡುವ ಪಲಾಯನವಾಗಿದ್ದಲ್ಲಿ ತಥಾಕಥಿತ ಸಾಕ್ಷಾತ್ಕಾರ, ತಥಾಕಥಿತ ಜ್ಞಾನೋದಯ ಅಥವಾ ಮತ್ತೇನೋ ಎಲ್ಲ ಭ್ರಮೆ ಮತ್ತು ಬೂಟಾಟಿಕೆ. ಒಲವು, ಜೀವನದ ತಿಳಿವಳಿಕೆ ಹಾಗೂ ಕ್ರಿಯೆಯನ್ನು ನಿರಾಕರಿಸುವುದೆಲ್ಲ ಕಿಡಿಗೇಡಿತನದ್ದು; ಅದು ಮನಸ್ಸನ್ನು ವಿರೂಪಗೊಳಿಸುತ್ತದೆ; ಬದುಕನ್ನು ಘೋರ ನರಕವಾಗಿಸುತ್ತದೆ. ಹೀಗಾಗಿ ನಾವು ಅದನ್ನು ಸಿದ್ಧಸೂತ್ರವೆಂದು ಪರಿಗಣಿಸಿದರೆ ಪ್ರಾಯಃ ಜ್ಞಾನೋದಯವನ್ನು ಜೀವಿಸುವ ಕ್ರಮದಲ್ಲಿ ಕಂಡುಕೊಳ್ಳಬಹುದೇ ಎಂಬುದನ್ನು ಪರಿಶೀಲಿಸಬಹುದು. ಏಕೆಂದರೆ, ಯಾವುದೇ ವಿಚಾರ, ಆದರ್ಶ, ಗುರಿ ಅಥವಾ ಸೂತ್ರಕ್ಕಿಂತ ಬದುಕು ಹೆಚ್ಚು ಮುಖ್ಯ. ಬದುಕುವುದು ಅಂದರೆ ಏನು ಎಂದು ನಮಗೆ ತಿಳಿದಿಲ್ಲ; ಹೀಗಾಗಿ ಪಲಾಯನಗಳನ್ನು ಒದಗಿಸುವ ಈ ದಾರ್ಶನಿಕವೂ ಅಸಹಜವೂ ಆದ ಪರಿಕಲ್ಪನೆಗಳನ್ನು ಆವಿಷ್ಕರಿಸುತ್ತೇವೆ. ನಿಜವಾದ ಪ್ರಶ್ನೆ ಎಂದರೆ, ಜೀವನದಲ್ಲಿ ದಿನನಿತ್ಯದ ಜೀವನದ ಚಟುವಟಿಕೆಗಳಲ್ಲಿ ಯಾರಿಗಾದರೂ ಜ್ಞಾನೋದಯವಾಗಬಹುದೆ? ಅಥವಾ ಅಸಾಧಾರಣವಾದ ಸಾಮರ್ಥ್ಯ ಇರುವ ಕೆಲವೇ ಕೆಲವರು ಈ ಪರಮಾನಂದವನ್ನು ಕಂಡುಕೊಳ್ಳುವರೇ? ಜ್ಞಾನೋದಯ ಎಂದರೆ ತನಗೆ ತಾನೇ ಬೆಳಕಾಗುವುದು; ಸ್ವ-ಪ್ರಕ್ಷೇಪಿತವಲ್ಲದ ಅಥವಾ ಕಾಲ್ಪನಿಕವಲ್ಲದ ಬೆಳಕು; ವ್ಯಕ್ತಿಗತ ವೈಚಿತ್ರ್ಯವಲ್ಲ. ಕಡೆಗೂ ಇದೇ ನಿಜವಾದ ಧರ್ಮದ ಬೋಧನೆ; ಸಂಘಟಿತ ಮತ ಹಾಗೂ ಭಯದ ಬೋಧನೆಯಲ್ಲ.

ಪೃಚ್ಛಕ: ನಿಜವಾದ ಧರ್ಮದ ಬೋಧನೆ ಎಂದು ನೀವು ಹೇಳಿದಿರಿ? ಇದು ತತ್‌ಕ್ಷಣದಲ್ಲಿ ವೃತ್ತಿಪರರು, ವಿಶೇಷಜ್ಞರು ಮತ್ತು ಅವರ ವಿರುದ್ಧ ಉಳಿದವರು ಎಂಬ ವಿರೋಧಿ ಗುಂಪುಗಳ ನಿರ್ಮಾಣಕ್ಕೆ ಕಾರಣವಾಗುತ್ತದೆ. ಹಾಗಾದರೆ ನಿಮ್ಮ ಅರ್ಥದ ಪ್ರಕಾರ ಧರ್ಮ ಬೇರೆ, ಜೀವನ ಬೇರೆಯಾ?

ಕೃಷ್ಣಮೂರ್ತಿ: ಧರ್ಮವು ಜೀವನದಿಂದ ಬೇರೆಯಾದುದಲ್ಲ; ಅದು ಜೀವನವೇ ಆಗಿದೆ. ಧರ್ಮ ಹಾಗೂ ಜೀವನದ ನಡುವಿನ ಈ ಭೇದವೇ ನೀವು ಹೇಳಿರುವ ಎಲ್ಲ ದುಃಖಗಳಿಗೆ ಕಾರಣ. ಆದುದರಿಂದ ನಾವು ಮೂಲಪ್ರಶ್ನೆಗೆ ಹಿಂದಿರುಗೋಣ - ನಿತ್ಯ ಜೀವನದಲ್ಲಿ ತತ್ಕಾಲಕ್ಕೆ ನಾವು ಕರೆಯುವ ಜ್ಞಾನೋದಯದ ಸ್ಥಿತಿಯಲ್ಲಿ ಬದುಕಲು ಸಾಧ್ಯವೇ?

ಪೃಚ್ಛಕ: ನನಗೆ ಈಗಲೂ ಗೊತ್ತಾಗಿಲ್ಲ ಜ್ಞಾನೋದಯದ ಬಗೆಗಿನ ನಿಮ್ಮ ಅರ್ಥ.

ಕೃಷ್ಣಮೂರ್ತಿ: ನೇತಿಯ ಸ್ಥಿತಿ. ನೇತಿ ಎಂಬುದು ಅತ್ಯಂತ ಧನಾತ್ಮಕ ಕ್ರಿಯೆ, ಧನಾತ್ಮಕ ಪ್ರತಿಪಾದನೆಯಲ್ಲ. ಇದನ್ನು ಅರ್ಥಮಾಡಿಕೊಳ್ಳುವುದು ತುಂಬಾ ಮುಖ್ಯ. ನಮ್ಮಲ್ಲಿ ಹೆಚ್ಚಿನವರು ಬಹಳ ಸುಲಭವಾಗಿ ಧನಾತ್ಮಕ ಶಾಸ್ತ್ರ ಸಿದ್ಧ ಸಂಗತಿಗಳನ್ನು, ಧನಾತ್ಮಕ ಪಂಥವನ್ನು ಒಪ್ಪಿಕೊಳ್ಳುತ್ತಾರೆ; ಏಕೆಂದರೆ ನಾವು ಸುರಕ್ಷಿತವಾಗಿರಬೇಕು, ಯಾವುದಕ್ಕೋ ಸೇರಿಕೊಂಡಿರಬೇಕು, ಯಾರನ್ನಾದರೂ ಅವಲಂಬಿಸಬೇಕು, ಯಾರಿಗಾದರೂ ಜೋತು ಬೀಳಬೇಕು ಎಂದು ಬಯಸುತ್ತೇವೆ. ಈ ಧನಾತ್ಮಕ ಮನೋಭಾವ ಭೇದವನ್ನು ಕಲ್ಪಿಸಿ ದ್ವಂದ್ವವನ್ನು ಸೃಷ್ಟಿಸುತ್ತದೆ. ಆಮೇಲೆ ಮನೋಭಾವ ಹಾಗೂ ಇತರ ಸಂಗತಿಗಳ ನಡುವೆ ಸಂಘರ್ಷ ಶುರುವಾಗುತ್ತದೆ. ಆದರೆ ಸಕಲ ಮೌಲ್ಯಗಳು, ನೈತಿಕತೆ, ಶ್ರದ್ಧೆಗಳು ಇತ್ಯಾದಿಗಳ ನಿರಾಕರಣದಿಂದ ಸೀಮಾತೀತ ಸ್ಥಿತಿ ಉಂಟಾಗುತ್ತದೆ. ಈ ಸ್ಥಿತಿ ಯಾವುದಕ್ಕೂ ವಿರೋಧಿಯಾಗಿರುವುದಿಲ್ಲ. ಧನಾತ್ಮಕ ಹೇಳಿಕೆ ಅದರ ವ್ಯಾಖ್ಯೆಯಲ್ಲೇ ಪ್ರತ್ಯೇಕತೆಯನ್ನು ಸೃಷ್ಟಿಸುತ್ತದೆ. ಪ್ರತ್ಯೇಕತೆ ಎಂಬುದು ಪ್ರತಿರೋಧ. ಇದಕ್ಕೆ ನಾವು ಒಗ್ಗಿಕೊಂಡಿದ್ದೇವೆ, ಇದು ನಮ್ಮ ಅನುಬಂಧನ. ಇದೆಲ್ಲವನ್ನೂ ನಿರಾಕರಿಸುವುದು ಅನೈತಿಕವಲ್ಲ; ಅದಕ್ಕೆ ಬದಲಾಗಿ ಎಲ್ಲ ವಿಭಜನೆಗಳನ್ನು, ಪ್ರತಿರೋಧಗಳನ್ನು ನಿರಾಕರಿಸುವುದು ಪರಮಶ್ರೇಷ್ಠ ನೈತಿಕತೆ - ಮನುಷ್ಯ ಕಂಡು ಹುಡುಕಿದ, ಆವಿಷ್ಕರಿಸಿದ ಸಕಲವನ್ನೂ ನಿರಾಕರಿಸುವುದು, ಅವನ ಎಲ್ಲ ಮೌಲ್ಯಗಳನ್ನು, ನೀತಿಸಂಹಿತೆಯನ್ನು, ದೇವರುಗಳನ್ನು ನಿರಾಕರಿಸುವುದು ಎಂದರೆ ಯಾವುದೇ ದ್ವಂದ್ವಗಳಿಲ್ಲದ, ಪ್ರತಿರೋಧಗಳಿಲ್ಲದ, ಸಂಘರ್ಷಗಳಿಲ್ಲದ ಮನಸ್ಥಿತಿಯಲ್ಲಿರುವುದು ಎಂದರ್ಥ. ಈ ಸ್ಥಿತಿಯಲ್ಲಿ ವಿರೋಧಗಳಿಲ್ಲ; ಈ ಸ್ಥಿತಿ ಇನ್ನಾವುದಕ್ಕೂ ವಿರೋಧಿಯೂ ಅಲ್ಲ.

ಪೃಚ್ಛಕ: ಹಾಗಾದರೆ ನಿಮಗೆ ಒಳ್ಳೆಯದು ಮತ್ತು ಕೆಟ್ಟದ್ದು ಹೇಗೆ ಗೊತ್ತಾಗುತ್ತದೆ? ಅಥವಾ ಒಳ್ಳೆಯದು ಮತ್ತು ಕೆಟ್ಟದ್ದು ಎಂಬುದಿಲ್ಲವೇ? ನಾನು ಕೊಲೆ ಅಥವಾ ಅಪರಾಧ

ಮಾಡುವುದನ್ನು ತಡೆಯುವುದು ಯಾವುದು? ಮಾನ ಮರ್ಯಾದೆಯ ಮಾನದಂಡಗಳಿಲ್ಲದಿದ್ದರೆ ನನ್ನನ್ನು ದುಷ್ಕರ್ಮಗಳಲ್ಲಿ ತೊಡಗದಂತೆ ತಡೆಯುವುದು ಯಾವುದು? ಇದು ಮರ್ಯಾದೆಗೇಡಿತನ ಎಂದು ತಿಳಿಯುವುದು ಹೇಗೆ?

ಕೃಷ್ಣಮೂರ್ತಿ: ಈ ಎಲ್ಲವನ್ನೂ ನಿರಾಕರಿಸುವುದು ಎಂದರೆ ತನ್ನನ್ನೇ ತಾನು ನಿರಾಕರಿಸುವುದು. ಆದರೆ ಈ ತಾನು ಅನುಬಂಧಿತವಾಗಿದ್ದು ನಿರಂತರವಾಗಿ ಅನುಬಂಧಿತ ಒಳಿತನ್ನು ಅರಸುತ್ತಿರುತ್ತದೆ. ನಮ್ಮಲ್ಲಿ ಹೆಚ್ಚಿನವರಿಗೆ, ನೇತಿ ಎಂಬುದು ಶೂನ್ಯವೆಂದು ತೋರುತ್ತದೆ. ಏಕೆಂದರೆ ನಮ್ಮ ಅನುಬಂಧನ, ಭಯ ಹಾಗೂ ದುಃಖದ ಪಂಜರದಲ್ಲೇ ಚಟುವಟಿಕೆ ಎಂಬುದು ನಮಗೆ ಗೊತ್ತು. ಅದರ ಮೂಲಕ ನಾವು ನಿರಾಕರಣದ ಕಡೆ ನೋಡಿ ಅದೊಂದು ಭಯಂಕರ ಶೂನ್ಯದ ಅಥವಾ ಖಾಲಿತನದ ಸ್ಥಿತಿ ಎಂದು ಕಲ್ಪಿಸಿಕೊಳ್ಳುತ್ತೇವೆ. ಸಮಾಜ, ಧರ್ಮ, ಸಂಸ್ಕೃತಿ, ನೈತಿಕತೆ ಇತ್ಯಾದಿಗಳೆಲ್ಲವನ್ನೂ ನಿರಾಕರಿಸಿದ ವ್ಯಕ್ತಿಗೆ ಸಾಮಾಜಿಕ ಅನುಸರಣೆಯ ಸೆರೆಮನೆಯಲ್ಲಿ ಸಿಲುಕಿಕೊಂಡ ವ್ಯಕ್ತಿ ದುಃಖಿತ. ನಿರಾಕರಣವು ಜ್ಞಾನೋದಯದ ಸ್ಥಿತಿಯಾಗಿದ್ದು ಗತದಿಂದ ಮುಕ್ತನಾದ ವ್ಯಕ್ತಿಯ ಎಲ್ಲ ಚಟುವಟಿಕೆಗಳಲ್ಲಿ ಕಂಡುಬರುತ್ತದೆ. ತನ್ನ ಸಂಪ್ರದಾಯ ಹಾಗೂ ಅಧಿಕಾರ ಸಹಿತವಾದ ಗತಕಾಲವನ್ನು ನಿರಾಕರಿಸಬೇಕಾಗಿದೆ. ನಿರಾಕರಣೆ ನೇತಿ ಎಂಬುದು ಬಿಡುಗಡೆ, ಸ್ವತಂತ್ರನಾದ ಮನುಷ್ಯ ಮಾತ್ರವೇ ಜೀವಿಸುತ್ತಾನೆ, ಪ್ರೀತಿಸುತ್ತಾನೆ ಮತ್ತು ಸಾಯುವುದು ಎಂದರೆ ಏನು ಎಂದು ಅರಿತಿರುತ್ತಾನೆ.

"'ಏನಿದೆಯೋ' ಅದನ್ನು ಭೂತ ಮತ್ತು ಭವಿಷ್ಯದೊಂದಿಗೆ ಹೋಲಿಸದೇ ಇರಲು ಅಪಾರ ಅವಧಾನ ಬೇಕಾಗುತ್ತದೆ."
ಜೆ.ಕೃಷ್ಣಮೂರ್ತಿ

ಪೃಚ್ಛಕ: ಅಷ್ಟರಮಟ್ಟಿಗೆ ನಿಚ್ಚಳವಾಯಿತು; ಆದರೆ ಅತೀತವಾದುದು, ದೈವಿಕವಾದುದು ಅಥವಾ ನೀವೇನೇ ಹೆಸರಿನಿಂದ ಕರೆಯಿರಿ ಅದರ ಸೂಚನೆ ಬಗ್ಗೆ ನೀವೇನೂ ಹೇಳುತ್ತಿಲ್ಲ.

ಕೃಷ್ಣಮೂರ್ತಿ: ಅದರ ಸೂಚನೆಯನ್ನು ನೀವು ಬಿಡುಗಡೆಯಲ್ಲಿ ಕಂಡುಕೊಳ್ಳುವಿರಿ. ಅದರ ಬಗ್ಗೆ ಹೇಳುವ ಯಾವುದೇ ಮಾತು ಸ್ವಾತಂತ್ರದ ನಿರಾಕರಣ. ಅದರ ಬಗೆಗಿನ ಯಾವುದೇ ಹೇಳಿಕೆ ಅರ್ಥಶೂನ್ಯ ಶಾಬ್ದಿಕ ಸಂವಹನ. ಅದು ಇದೆ, ಅದನ್ನು ಕಂಡುಕೊಳ್ಳಲು, ಆಹ್ವಾನಿಸಲು ಸಾಧ್ಯವಿಲ್ಲ. ಅದನ್ನು ಯಾವುದೇ ವ್ಯವಸ್ಥೆಯಿಂದ ಬಂಧಿಸಲಾಗದು; ಮನಸ್ಸಿನ ಕುಟಿಲ ತಂತ್ರಗಳಿAದ ಅದನ್ನು ನಾಶಮಾಡಲು ಸಾಧ್ಯವಿಲ್ಲ. ಅದು ಇಗರ್ಜಿಗಳಲ್ಲಿ, ದೇಗುಲಗಳಲ್ಲಿ, ಮಸೀದಿಗಳಲ್ಲಿ ಇಲ್ಲ. ಅದಕ್ಕೆ ಹಾದಿಗಳಿಲ್ಲ, ಗುರುವಿಲ್ಲ, ಅದರ ಚೆಲುವನ್ನು ದರ್ಶಿಸುವ ವ್ಯವಸ್ಥೆ ಇಲ್ಲ; ಒಲವು ಇರುವಲ್ಲಿ ಅದರ ಪರಮಾನಂದ ಸ್ವರೂಪ ಮೈದೋರುತ್ತದೆ. ಇದೇ ಜ್ಞಾನೋದಯ.

ಪೃಚ್ಛಕ: ಅದು ಇರವಿನ ಅಥವಾ ಪ್ರಜ್ಞೆಯ ಅಥವಾ ವಿಶ್ವದ ಸ್ವಭಾವ ಸ್ವರೂಪಗಳ ಬಗ್ಗೆ ಏನಾದರೂ ಹೊಸ ತಿಳಿವಳಿಕೆ ನೀಡುವುದೇ? ಎಲ್ಲ ಧರ್ಮ ಗ್ರಂಥಗಳು ಈ ಬಗೆಯ ವಿವರಗಳಿಂದ ತುಂಬಿಹೋಗಿವೆ.

ಕೃಷ್ಣಮೂರ್ತಿ: ಇದು ಹೇಗೆಂದರೆ ಈ ದಡದಲ್ಲಿ ಬದುಕುತ್ತಾ, ಬಸವಳಿಯುತ್ತಾ ಆಚೆ ದಡದ ಬಗ್ಗೆ ಪ್ರಶ್ನಿಸುವುದಾಗಿದೆ. ನೀವು ಆಚೆ ದಡದಲ್ಲಿರುವಾಗ, ನೀವೇ ಎಲ್ಲವೂ ಅಥವಾ ಏನೂ ಅಲ್ಲ. ನೀವು ಇಲ್ಲಿ ಇಂಥ ಪ್ರಶ್ನೆಗಳನ್ನು ಕೇಳುವುದೇ ಇಲ್ಲ. ಇಂಥ ಎಲ್ಲ ಪ್ರಶ್ನೆಗಳು ಈ ದಡದವುಗಳು ಮತ್ತು ನಿಜಕ್ಕೂ ಅರ್ಥಶೂನ್ಯ. ಬದುಕಲು ಆರಂಭಿಸಿ; ಕೇಳದೇ, ಬಯಸದೆ, ಅರಸದೆ, ಭಯಪಡದೆ ನೀವು ಬದುಕುವಿರಿ.

ಕೃತಿ: " ನೂತನಾಭ್ಯಾಸಿಗಳಿಗಾಗಿ ಕೃಷ್ಣಮೂರ್ತಿ", ಭಾಗ ೫
ಅನುವಾದ: ಡಾ. ಶ್ರೀ ಮಹಾಬಲೇಶ್ವರ ರಾವ್
ಮೂಲ: "krishnamurti for Beginners"

ಬೆಂಗಳೂರು ಅಧ್ಯಯನ ಕೇಂದ್ರದ ಪ್ರಕಟಣೆ

ಶಿಬಿರದ ಮಾಹಿತಿ (Study Retreat Themes 2022-2023) :

Jul 07 - 10 : What does it mean to be a 'Responsible Parent'?

Aug 11-14 : Exploring Harmony in Relationships.

Sep 08-11 : What is 'Holistic Education'?

Oct 06-09 : Understanding 'Emotions' - Hurt, Frustration &Anger

Nov 10-13 : Breaking free from the 'prison of the mind'.

Dec 08-11 : Retreat for Young (18-35yrs) 4 days: What are you doing with your Life?

Jan 05-08 : Significance of Living in the Here and Now' in daily life

Feb 09 - 12 : Silence, Stillness, Meditation.

Mar 09 - 12 : Living in the Grip of Fear - what does fear do to you?

Apr 06-09 : Karnataka J.K Adhayana Shibira: Understanding Relationship.

(Proceedings in Kannada & English)



ಬೆಂಗಳೂರು ಅಧ್ಯಯನ ಕೇಂದ್ರ, ಕೃಷ್ಣಮೂರ್ತಿ ಪ್ರತಿಷ್ಠಾನ ಭಾರತ
ಸಹ-ಅಧ್ಯಯನ ಶಿಬಿರ, ೨ ರಿಂದ ೪ ಸೆಪ್ಟೆಂಬರ್ ೨೦೨೨

ವಿಷಯ : "ಸಂಬಂಧ ಹಾಗೂ ಪರಿವರ್ತನೆಯ ಸವಾಲು"

ಈ ಮೂರುದಿನದ ಶಿಬಿರದ ಆಶಯವು ಜೆ ಕೃಷ್ಣಮೂರ್ತಿಯವರ ಬೋಧನೆಗಳ ಬೆಳಕಿನಲ್ಲಿ "ಸಂಬಂಧ ಹಾಗೂ ಪರಿವರ್ತನೆಯ ಸವಾಲು" ವಿಷಯವನ್ನು ಸ್ವಾಧ್ಯಾಯ ಹಾಗೂ ಸಹ-ಅಧ್ಯಯನ ಚಟುವಟಿಕೆಗಳ ಮೂಲಕ ಶೋಧಿಸುವುದಾಗಿದೆ. ಈ ಶಿಬಿರವು ನೂರು ಎಕರೆ ವಿಸ್ತೀರ್ಣದ ಸೊಂಪಾದ ಹಸಿರು ವನದ ನೈಸರ್ಗಿಕ ಸೌಂದರ್ಯ ಹಾಗೂ ಪ್ರಶಾಂತ ಮೌನದ ವಾತಾವರಣದಲ್ಲಿ ನೆರವೇರುತ್ತದೆ. ಈ ಶಿಬಿರದ ಎಲ್ಲಾ ಚಟುವಟಿಕೆಗಳು ಮತ್ತು ಸಂವಾದಗಳು ಕನ್ನಡದಲ್ಲಿ ನಡೆಯಲಿವೆ. ಶಿಬಿರ ನಡೆಯುವ ಅಧ್ಯಯನ ಕೇಂದ್ರದಲ್ಲಿ ನಿಯಮಿತ ಸ್ಥಳಾವಕಾಶವಿರುವುದರಿಂದ, ಮೊದಲು ನೋಂದಾಯಿಸಿದ ಶಿಬಿರಾರ್ಥಿಗಳಿಗೆ ಆದ್ಯತೆಯಿರುತ್ತದೆ. ಶಿಬಿರಾರ್ಥಿಗಳು ದೂರವಾಣಿ ಅಥವಾ ಮಿಂಚಂಚೆ ಮೂಲಕ ನೋಂದಾಯಿಸಬಹುದು.

ಶಿಬಿರಾರ್ಥಿಗಳು ಸೆಪ್ಟೆಂಬರ್ ൧ನೇ ಗುರುವಾರ ಸಂಜೆ ൬ ൩൦ ರಿಂದ ൭:൦൦ ಗಂಟೆಯೊಳಗೆ ಅಧ್ಯಯನ ಕೇಂದ್ರ ತಲುಪುವುದು ಅವಶ್ಯ. ಸಂಜೆ ൬:൧൫ ಕ್ಕೆ ರೇಷ್ಮೆ ಸಂಸ್ಥೆ ಮೇಟ್ರೋ ನಿಲ್ದಾಣದಿಂದ ಗುಂಪು ಸಾರಿಗೆ ವ್ಯವಸ್ಥೆ ಇರುತ್ತದೆ. ಪ್ರತಿ ಶಿಬಿರಾರ್ಥಿಗಳಿಗು ಪ್ರತ್ಯೇಕ ವಸತಿ ವ್ಯವಸ್ಥೆ ಇರುತ್ತದೆ. ಸರಳ ಸಸ್ಯಾಹಾರಿ ಊಟ ಉಪಹಾರ ವ್ಯವಸ್ಥೆ ಇರುತ್ತದೆ. ಶಿಬಿರದ ವೆಚ್ಚಗಳಿಗಾಗಿ ಸೂಚಿಸಿದ ಕೊಡುಗೆ: ತಲಾ ൬,൫൦൦ರೂ (Rs.6,500/-) **ಆಗಿದೆ. ದಿನಾಂಕ ೨೦ ಆಗಸ್ಟ್ ಒಳಗಾಗಿ ನೊಂದಯಿಸಿದರೆ ತಲಾ ൫,൫൦൦ರೂ** (Rs.5,500/-) **ಮಾತ್ರ ಪಾವತಿಸಬಹುದು.**

ಅಧ್ಯಯನ ಕೇಂದ್ರ, ಬೆಂಗಳೂರು; ವ್ಯಾಲಿಶಾಲೆ ಆವರಣ,

൧൭ನೇ ಕಿ ಮೀ, ಕನಕಪುರ ರಸ್ತೆ,

ಪೋ: ತಾತಗುಣಿ, ಬೆಂಗಳುರು ൫൬൦൦൮൨

ದೂರವಾಣಿ: 9972995800

ಮಿಂಚಂಚೆ: kfistudy@gmail.com



ಜೆ.ಕೃಷ್ಣಮೂರ್ತಿ ಪುಸ್ತಕಗಳು : ರಿಯಾಯಿತಿಯಲ್ಲಿ ಲಭ್ಯ













ಆತ್ಮೀಯ ಸಹಪಯಣಿಗರೇ,ಈ ಮೇಲಿನ ಆರು ಕಿರುಪುಸ್ತಕಗಳ ಹಾಗೂ ಈ ಕೆಳಗಿನ ನಾಲ್ಕು ಪುಸ್ತಕಗಳ 100ಕ್ಕೂ ಹೆಚ್ಚು ಪ್ರತಿಗಳು 50% ವರೆಗೆ ರಿಯಾಯಿತಿ ದರದಲ್ಲಿ ಲಭ್ಯವಿವೆ. ನಿಮ್ಮ ಬಳಗದ ಗ್ರಂಥಾಲಯ, ಪುಸ್ತಕಾಲಯ, ವಿದ್ಯಾರ್ಥಿಗಳು, ಶಿಕ್ಷಕರು, ಬಂಧುಗಳು, ಇತ್ಯಾದಿ ಆಸಕ್ತರಿಗೆ ತಿಳಿಸಿ.

ಪ್ರತಿಗಳಿಗಾಗಿ ಸಂಪರ್ಕಿಸಿ – 7760807069, 9972995800.









Published by:
Editor: Smt. Sushama Inamdar
The Study Bangalore Education Centre
Krishnamurti Foundation India
Thataguni Post, Bangalore - 560082

Contact Information:
Mob: 9482641389 / 8317419451
Email: kfistudy@gmail.com
Website: www.kfistudy.org

ಕನ್ನಡ ಭಾಷಾಂತರ ಸಮಿತಿ ಸದಸ್ಯರು:
ಡಾ. ಎಚ್. ಎಸ್. ರಾಘವೇಂದ್ರರಾವ್
ಪ್ರೊ॥ ಓ. ಎಲ್. ನಾಗಭೂಷಣ ಸ್ವಾಮಿ
ಡಾ. ಮಹಾಬಲೇಶ್ವರ ರಾವ್